ಶ್ರೀ ಎಸ್.ಎಂ. ಯಾಹ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಮೆಟೀರಿಯಲ್ಸ್‌ನ್ನು ಸಪ್ಲೆ ಮಾಡುತ್ತಿರುತ್ತಾರೋ ಇಲ್ಲವೊ ಎಂದು ಕೇಳಿದ್ದಾರೆ. ನಾವು ಪಂಪ್ ಸೆಟ್ ಗಳಿಗಾಗಿ ಸೌತ್ ಕೆನರಾಕ್ಕೆ ಒಂದು ಟಾರ್‌ಗೆಟ್ ಇಟ್ಟು ಕೊಂಡಿದ್ದೇವೆ. ೧೯೮೯–೯೦ಕ್ಕೆ ೨೮೫೦ ಟಾರ್ ಗೆಟ್ ಇಟ್ಟುಕೊಂಡಿದ್ದೆವು. ಅದು ಟಾರ್‌ಗೆಟ್ ವಿರುದ್ಧ ೩೦೫೬ ಪಂಪ್‌ಸೆಂಟ್‌ಗಳಾಯಿತು. ಇಷ್ಟಕ್ಕೂ ಮೆಟೀರಿಯಲ್ಸ್‌ನ್ನು ಕೊಟ್ಟಿದ್ದೇವೆ. ೧೯೯೦ಕ್ಕೆ ಟಾರ್‌ಗೆಟ್ ಹೆಚ್ಚು ಮಾಡಿ ೩೬೦೦ಕ್ಕೆ ಮೆಟೀರಿಯಲ್ಸ್ ಕೊಟ್ಟಿದ್ದೇವೆ, ಕಳೆದ ವರ್ಷವು ಟಾರ್‌ಗೆಟ್ ಹೆಚ್ಚಾಗಿದೆ. ಟಾರ್‌ಗೆಟ್ ಪ್ರಕಾರ ಮೆಟೀರಿಯಲ್ಸ್ ಕೊಟ್ಟು ಫುಲ್‌ಫಿಲ್ ಮಾಡದಿದ್ದಲ್ಲಿ ಎಷ್ಟು ಮೆಟೀರಿಯಲ್ಸ್ ಕೊಡಬೇಕಾಗಿರುತ್ತದೋ ಅಷ್ಟನ್ನು ಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ. ರಮಾನಾಥ ರೈ.—ಮೆಟೀರಿಯಲ್ಸ್ ಕೊಟ್ಟಿಲ್ಲವೆನ್ನುವ ಪ್ರಶ್ನೆಯಲ್ಲ. ನಮಗೆ ಬೇಕಾಗಿರತಕ್ಕಂಥ ಬೇಡಿಕೆಯಲ್ಲಿ ಸ್ವಲ್ಪಮಟ್ಟಿಗೆ ಕೊಟ್ಟರೆ ಅದರಿಂದ ಪೂರ್ಣ ಬೇಡಿಕೆಯನ್ನು ಫುಲ್‌ಫಿಲ್ ಮಾಡಿದಂತಾಗುವುದಿಲ್ಲ. ಅಭಿವೃದ್ಧಿಯಾಗಬೇಕಾಗಿರತಕ್ಕಂಥ ನಮ್ಮ ಜಿಲ್ಲೆಯಲ್ಲಿ ವಿಶೇಷವಾದಂತ ಬೇಡಿಕೆ ಇರುತ್ತದೆ. ಸಲಕರಣೆಗಳ ಕೊರತೆ ವಿಪರೀತವಾಗಿರುತ್ತದೆ. ಆದ್ದರಿಂದ ಪೂರ್ಣ ಪ್ರಮಾಣದಲ್ಲಿ ನಮ್ಮ ಬೇಡಿಕೆಯನ್ನು ಪೂರೈಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ಪ್ರಶ್ನೆಯನ್ನು ಕೇಳಿದ್ದೆವು, ಈ ಕಚೇರಿ ಶಿವಮೊಗ್ಗಕ್ಕೆ ಹೋಗಬೇಕಾದಂಥ ಪ್ರಸಂಗವಿದೆ, ಇದರಿಂದಾಗಿ ಬಹಳ ತೊಂದರೆಯಾಗುತ್ತಿದೆ. ಅನೇಕ ವರ್ಷಗಳಿಂದ ಸೂಪರಿಂಟೆಂಡೆಂಟ್ ಇಂಜಿನೀಯರ್‌ರವರ ಕಚೇರಿಯನ್ನು ಮಂಗಳೂರಿನಲ್ಲಿ ಮಾಡಿದರೆ ನೇರವಾಗಿ ನಾವು ಸಲಕರಣೆಗಳನ್ನು ಕೇಳಲಿಕ್ಕೆ ಅನುಕೂಲವಾಗುತ್ತದೆ. ಇವೊತ್ತು ಟ್ರಾನ್ಸ್‌ಫಾರ್ಮರ್ಸ್ ಬೇಕಾಗಿದೆ ಎಂದರೆ ಶಿವಮೊಗ್ಗಕ್ಕೆ ಹೋಗಬೇಕಾಗಿದೆ. ದಯವಿಟ್ಟು ಇಲ್ಲಿಯ ಜನರ ಸಮಸ್ಯೆಯನ್ನು ನಿವಾರಣೆ ಮಾಡಬೇಕೆಂದರೆ ಮಂಗಳೂರಿನಲ್ಲಿ ಒಂದು ಸೂಪರಿಂಟೆಂಡೆಂಟ್ ಕಚೇರಿಯನ್ನು ತೆರೆಯಬೇಕೆಂದು ಮಾನ್ಯ ಸಚಿವರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಸೌತ್ ಕೆನರಾದಲ್ಲಿ ಹೆಚ್ಚು ಹೆಚ್ಚು ಮೆಟೀರಿಯಲ್ ಕೊಡಬೇಕೆಂದು ಇದ್ದರೂ ನಾವು ಟಾರ್ಗೆಟ್ ಇಡಲೇಬೇಕಾಗುತ್ತದೆ. ಟಾರ್ಗೆಟ್ ಇಡದೆ ಯಾವ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ. ಟಾರ್ಗೆಟ್‌ಗಿಂತ ಜಾಜ್ತಿಗೆಯೇ ಸೌತ್ ಕೆನರಾಕ್ಕೆ ಕೊಟ್ಟಿದ್ದೇವೆ. ಇನ್ನೂ ಹೆಚ್ಚು ಬೇಡಿಕೆ ಇದೆ. ಆದರೆ ಪ್ರಕಾರ ಸರ್ಕಾರದಲ್ಲಿ ಎಷ್ಟು ರಿಸೋರ್ಸ್ ಇದೆಯೋ ಅಷ್ಟನ್ನು ಕೊಡುತ್ತೇವೆ. ಸೌತ್ ಕೆನರಾ ಜಾಜ್ತಿ ಪ್ರೋಗ್ರೆಸ್ಸೀವ್ ಮತ್ತು ಅಗ್ರಿಕಲ್ಚರಲ್ ಪ್ರೊಡಕ್ಷನ್‌ನಲ್ಲಿ ಬಹಳ ಮುಂದಿದೆ ಎಂದು ಬಾಕಿ ಜಿಲ್ಲೆಗಳಿಗೆ ಕೊಟ್ಟದ್ದಕ್ಕಿಂತ ಸೌತ್ ಕೆನರಾಕ್ಕೆ ಹೆಚ್ಚಿಗೆ ಕೊಟ್ಟಿದ್ದೇವೆ. ಅಲ್ಲಿಗೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಫೀಸನ್ನು ಕೊಡಬೇಕೇ ಬೇಡವೇ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಎಲ್ಲೆಲ್ಲಿ ಹೊಸ ಆಫೀಸ್ ಗಳನ್ನು ತೆರೆಯಬೇಕೆಂಬುದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಈಗ ಮಂಗಳೂರಿನಲ್ಲಿ ಚೀಫ್ ಇಂಜಿನಿಯರ್ ಆಫೀಸ್. ಇದೆ. ಚೀಫ್ ಇಂಜಿನಿಯರ್ ಇದ್ದಾರೆ.

ಶ್ರೀ ಬಿ. ರಮಾನಾಥ ರೈ– ನಮಗೆ ಚೀಫ್ ಇಂಜಿನಿಯರ್ ಬೇಕಾಗಿಲ್ಲ. ನಮಗೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಕಛೇರಿ ಬೇಕಾಗಿದೆ. ನಮ್ಮ ಜಿಲ್ಲೆಗೆ ವಿಶೇಷವಾಗಿ ವಿದ್ಯುತ್ತಿನ ಬೇಡಿಕೆ ಇದೆ. ಅದನ್ನು ಖಂಡಿತವಾಗಿ ಪೂರೈಸಬೇಕು.

ಶ್ರೀ ಎಸ್.ಎಂ. ಯಾಹ್ಯ.—ಕೆ.ಇ.ಬಿ.ಯು ಹೊಸ ಕಛೇರಿಗಳನ್ನು ತೆರೆಯುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಸೂಪರಿಂಟೆಂಡಿಂಗ್ ಇಂಜಿನಿಯರ್ ಆಫೀಸಿಗಿಂತ ಹೆಚ್ಚಾಗಿ ಕರ್ನಾಟಕದ ೨೦ ತಾಲ್ಲೂಕುಗಳಲ್ಲಿ ಸಬ್‌ಡಿವಿಜನ್ ಆಫೀಸ್ ಇಲ್ಲ ಅದನ್ನೆಲ್ಲಾ ಸರಿಯಾಗಿ ಮಾಡಬೇಕು. ಅಲ್ಲೆಲ್ಲಾ ಹೊಸ ಹೊಸ ಕಛೇರಿಗಳನ್ನು ತೆರೆಯಬೇಕು. ೨೦ ತಾಲ್ಲೂಕುಗಳಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಕಛೇರಿಗಳೇ ಇಲ್ಲ.

ಅಧ್ಯಕ್ಷರು —ಅವುಗಳನ್ನೆಲ್ಲಾ ರ್ಯಾಷನಲೈಸ್ ಮಾಡಿ. ಶ್ರೀ ವಾಟಾಳ್ ನಾಗರಾಜ್ ಅವರ ಪ್ರಶ್ನೆಗೆ ಸರ್ಕಾರದವರು ಟೈಂ ಕೇಳಿರುವುದರಿಂದ ಅದನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಭಾಗ್ಯಜ್ಯೋತಿ ಸಂಪರ್ಕವನ್ನು ತೆಗೆದಿರುವುದು.

೧೧೧. ಶ್ರೀ ಎ. ಟಿ. ರಾಮಸ್ವಾಮಿ,(ಅರಕಲಗೂಡು).—ಮಾನ್ಯ ಶೈಗಾರಿಕೆ, ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಜನತಾ ಮನೆಗಳಿಗೆ ಭಾಗ್ಯಜ್ಯೋತಿ ಅಸ್ಥೆಯ ವಿದ್ಯುಚ್ಛಕ್ತಿ ಒದಗಿಸುತ್ತಿದ್ದುದು ನಿಜವೇ

ಆ) ಹಾಲಿ ಈ ಸೌಲಭ್ಯವನ್ನು ನಿಲ್ಲಿಸಿರುವುದರಿಂದ ಬಡವರಿಗೆ ತೊಂದರೆ ಉಂಟಾಗಿರುವುದು ನಿಜವೇ ?

ಇ) ವಿದ್ಯುಚ್ಛಕ್ತಿ ಬಳಸಿದ್ದಕ್ಕೆ ವಿಧಿಸಿದ ಹಣವನ್ನು ವಸೂಲಾತಿ ಮಾಡದೆ ವಿನಾಯಿತಿ ನೀಡಲು ಕ್ರಮ ಕೈಗೊಳ್ಳಲಾಗುವುದೇ.

ಈ) ಪಾಗಿದ್ದಲ್ಲಿ ಪುನಃ ಈ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಿದೆಯೇ ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ಪಕ್ಷ್ಯ ಮಂತ್ರಿಗಳು).—

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಸಮಾಜದಲ್ಲಿನ ದುರ್ಬಲ ವರ್ಗದವರ ಮನೆಗಳಿಗೆ ಭಾಗ್ಯಜ್ಯೋತಿ ಯೋಜನೆಯಲ್ಲಿ ಒಂದು ಬಲ್ಬಿನ ವಿದ್ಯುತ್ ದೀಪ ಒದಗಿಸಿರುತ್ತಿದೆ. ಫಲಾನುಭವಿಗಳನ್ನು ಜಿಲ್ಲಾ ಪರಿಷತ್ ಗುರ್ತಿಸುತ್ತದೆ.

ಆ) ಈ ಸೌಲಭ್ಯವನ್ನು ನಿಲ್ಲಿಸಿರುವುದಿಲ್ಲ.

ಇ) ಫಲಾನುಭವಿಗಳು ನೀಡಬೇಕಾದ ಹಣ ಅತ್ಯಲ್ಪವಾಗಿರುವುದರಿಂದ ವಿನಾಯಿತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ''ಆ'' ಪ್ರಶ್ನೆಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಎ. ಟಿ. ರಾಮಸ್ವಾಮಿ.—ಸರ್ಕಾರದವರು ಬಡವರ ಮನೆಗಳಿಗೆ ಭಾಗ್ಯಜ್ಯೋತಿ ದೀಪವನ್ನು ಒದಗಿಸಿದರು. ಆದರೆ ಒದಗಿಸಿದ ನಂತರ ೭-೮ ವರ್ಷಗಳವರೆಗೆ ವಿದ್ಯುತ್ ಬಿಲ್ ಕೊಡಲಿಲ್ಲ. ಒಂದೇ ಸಾರಿ ಬಿಲ್ ಕೊಟ್ಟು ನಾಲ್ಕಾರು ನೂರು ರೂಪಾಯಿ ಚಾರ್ಜ್ ಬಂದಿದೆ, ಬಡಜನರಿಗೆ ಅದನ್ನು ಕಟ್ಟಲಿಕ್ಕೆ ಆಗದೆ ಇದ್ದುದರಿಂದ ಸಂಪರ್ಕವನ್ನು ಕಡಿತ ಮಾಡಿದ್ದಾರೆ. ಏನು ಒಂದು ದೀಪವನ್ನು ಆಗ ಕೊಟ್ಟಿದ್ದರೂ ಅದೂ ಕೂಡ ಇಲ್ಲವಾಗಿದೆ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ ? ಈ ಬಗ್ಗೆ ಸಚಿವರು ಏನು ಹೇಳುತ್ತಾರೆ ?

ಶ್ರೀ ಎಸ್. ಎಂ. ಯಾಹ್ಯ.—ಭಾಗ್ಯ ಜ್ಯೋತಿ ಯೋಜನೆ ಬಡವರಿಗೆ ಮತ್ತು ಕಡುಬಡವರಿಗೆ ಇರತಕ್ಕ ಯೋಜನೆ. ನಾನು ಹಣಕಾಸಿನ ಸಚಿವನಾಗಿದ್ದಾಗ ೧೯೭೯ರ ಬಜೆಟ್‌ನಲ್ಲಿ ಹಾಕಿ ಮಾಡಿದಂತಹ ಯೋಜನೆ. ಈ ಯೋಜನೆಯಿಂದ ಹೆಚ್ಚು ಹೆಚ್ಚು ಬಡವರಿಗೆ ಸಹಾಯ ಮಾಡಬೇಕೆಂದು ಈಗಲೂ ನಮ್ಮ ಸರ್ಕಾರದ ಉದ್ದೇಶವಾಗಿದೆ. ಈ ಯೋಜನೆಯನ್ನೇನು ತೆಗೆದುಹಾಕಲಿಲ್ಲ. ಮಾನ್ಯ ಸದಸ್ಯರಿಗೆ ಇದರ ಮೇಲೆ ಏನಾದರೂ ಆಸಂಪಾನವಿದ್ದರೂ ನಾವು ಮಾತ್ರ ಇದನ್ನು ತೆಗೆದುಹಾಕುವುದಿಲ್ಲ. ಇದನ್ನು ಇನ್ನೂ ಹೆಚ್ಚು ಮಾಡಲಿಕ್ಕೆ ಸಣ್ಣ ಸಣ್ಣ ಹಳ್ಳಿಗಳಿಗೆ ಕೂಡ ವಿದ್ಯುತ್ ಕೊಡುತ್ತಿದ್ದೇವೆ. ಇದಕ್ಕಿಂತ ಇನ್ನೂ ಹೆಚ್ಚು ಮಾಡಬಹುದೇ ಎಂದು ಯೋಜನೆ ಮಾಡಿ ಬೇಗನೆ ಸರ್ಕಾರ ಭಾಗ್ಯಜ್ಯೋತಿ ಯೋಜನೆ ಬಡವರಿಗೆ ಬೇಕಾದ ಯೋಜನೆ ಎಂದು ಸ್ಪ್ರಿಂಗ್ಟನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ಟಿ. ರಾಮಸ್ವಾಮಿ.—ನನ್ನ ಪ್ರಶ್ನೆ ಆದಲ್ಲ. ೭-೮ ವರ್ಷಗಳವರೆಗೆ ಕರೆಂಟ್ ಚಾರ್ಜನ್ನು ಕಟ್ಟಲಿಲ್ಲ. ಕಾರಣ ಬಿಲ್ ಕೊಡದೇ ಒಂದೇ ಸಾರಿ ೭-೮ ವರ್ಷಗಳ ಬಿಲ್ಲನ್ನು ಒಟ್ಟಿಗೆ ಕೊಟ್ಟಿದ್ದಾರೆ. ಅಷ್ಟು ಹಣವನ್ನು ಒಟ್ಟಿಗೆ ಕಟ್ಟಲಿಕ್ಕೆ ಬಡವರಿಗೆ ಸಾಧ್ಯವಾಗುತ್ತಿಲ್ಲ. ಆಯಾಯ ತಿಂಗಳು ಕೊಟ್ಟಿದ್ದರೆ ೨-೩ ರೂಪಾಯಿ ಒರುತ್ತಿತ್ತು ಹೇಗೋ ಆ ಬಡವರು ಕಟ್ಟಿಕೊಳ್ಳುತ್ತಿದ್ದರು. ಆದರೆ ಈಗ ಒಂದೇ ಸಾರಿ ೫೦-೬೦ ರೂಪಾಯಿಗಳನ್ನು ಕಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ. ಒಂದು ದೀಪಕ್ಕೆ ೬೦೦ ರೂಪಾಯಿ ಬಿಲ್ ಕೊಡುವುದಕ್ಕೆ ಬದಲು ಒಂದು ಪೊಸ ದೀಪ ಮತ್ತು ವೈರನ್ನು ಅವರು ಆಳವಡಿಸಿಕೊಳ್ಳಬಹುದು ಆದ್ದರಿಂದ ಈಗ ಏನು ಬಿಲ್ ೬೦ ರೂಪಾಯಿ ವರೆಗೆ ಕೊಟ್ಟಿದ್ದೀರೋ ಅದನ್ನು ಮಾಫಿ ಮಾಡಿ ಮುಂದೆ ಪ್ರತಿ ತಿಂಗಳು ತಿಂಗಳು ಬಿಲ್ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯ.—ಈ ವಿಷಯದಲ್ಲಿ ಸರ್ಕಾರ ಬಹಳ ಲಿಬರಲ್ ಇದೆ. ಭಾಗ್ಯಜ್ಯೋತಿ ಸ್ಕೀಮ್‌ನಲ್ಲಿ ತಿಂಗಳಿಗೆ ಎರಡೂವರೆ ರೂಪಾಯಿ ಏನು ಕೊಡಬೇಕೋ ಅದನ್ನು ಲೇಕಡ ೭೦ರಷ್ಟು ಫಲಾನುಭವಿಗಳು ಕೊಟ್ಟಿಲ್ಲ. ಬರೀ ಲೇಕಡ ೩೦ರಷ್ಟು ಜನ ಕೊಟ್ಟಿದ್ದಾರೆ. ಆದಕ್ಕೆ ನಾವೂ ಏನೂ ಕಾರ್ಯ ಕೂಡ ಮಾಡುತ್ತಾ ಇಲ್ಲ. ಅದಕ್ಕಾಗಿ ಇದರಲ್ಲಿ ಯಾವ ಗಾಬರಿ ಪಡುವುದು ಬೇಡ, ನಾವು ವಿದ್ಯುತ್ ಕಟ್ ಮಾಡುವುದಿಲ್ಲ ಆದರೆ ಅವರಾದರೂ ಅರಿಯರ್ಸ್ ಸ್ವಲ್ಪ ಕೊಟ್ಟರೆ ಈ ಸ್ಕೀಮನ್ನು ಇನ್ನೂ ಹೆಚ್ಚು ಜನರಿಗೆ ಅನುಕೂಲವಾಗುವಂತೆ ಮಾಡಬಹುದು.

ಶ್ರೀ ಹೆಚ್. ಎಂ. ರೇವಣ್ಣ.—ಹೆಚ್ಚು ಜನರಿಗೆ ಅನುಕೂಲ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳಂ ಹೇಳುತ್ತಿದ್ದಾರೆ. ಆದರೆ ಈಗಾಗಲೇ ಹರಿಜನರಿಗೆ ಈ ಯೋಜನೆ ಕೆಳಗೆ ಒದಗಿಸಿದ ದೀಪಗಳಿಗೆ ವಿದ್ಯುತ್ ನಿಲುಗಳ ಮಾಡಿದ್ದಾರಲ್ಲಾ ಇದರ ಬಗ್ಗೆ ಏನು ಹೇಳುತ್ತಾರೆ ? ಮತ್ತೆ ಅವರಿಗೆ ವಿದ್ಯುತ್ ಒದಗಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯ.—ಇದನ್ನು ಪರಿಶೀಲನೆ ಮಾಡುತ್ತೇನೆ.

ಕರಿಕಲ್ಲು ಮತ್ತು ಕೆಂಪುಕಲ್ಲು ಸಾರ್ವಜನಿಕರಿಗೆ ನೀಡಲು ಯಾವ ವಿಧವಾದ ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಬಗ್ಗೆ

೨೨೬. ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ).—ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರಿಕಲ್ಲು ಮತ್ತು ಕೆಂಪುಕಲ್ಲುಗಳನ್ನು ಸಾರ್ವಜನಿಕರಿಗೆ ನೀಡಲು ಯಾವ ವಿಧವಾದ ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಕರಿಕಲ್ಲು ಮತ್ತು ಕೆಂಪುಕಲ್ಲು ಫ್ಯಾಕ್ಟರಿ ಮಾಡುವವರಿಗೆ ಮಾತ್ರ ನೀಡುವುದರ ನಿಮ್ಮ ಉದ್ದೇಶವೇನು ?

ಶ್ರೀ ಬಿ. ಶಿವಣ್ಣ (ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ಸಾರ್ವಜನಿಕರಿಗೆ ಕರಿಕಲ್ಲು ಮತ್ತು ಕೆಂಪುಕಲ್ಲುಗಳ ಗುತ್ತಿಗೆ ನೀಡಲು ಅನುಕೂಲವಾಗುವಂತೆ ಕರ್ನಾಟಕ ಉಪಖನಿಜ ನಿಯಮಾವಳಿಯ ನಿಯಮ ೩-ಎ ಗೆ ತಿದ್ದುಪಡಿ ಮಾಡಲಾಗಿದೆ. ಅಧಿಸೂಚನೆ ಸಂಖ್ಯೆ. ಸಿಐ ೩೦೪ ಎಂಆರ್‌ಪಿ ೮೭ ದಿನಾಂಕ ೨೨-೫-೧೯೯೦.

ಆ) ಉದ್ದೇಶಗಳು ಕೆಳಕಂಡಂತಿವೆ.

೧ ಸಂಸ್ಕರಿಸಿದ ಶಿಲೆಯ ಮೌಲ್ಯ ಹೆಚ್ಚುವುದರಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಆದಾಯ ಮತ್ತು ವಿದೇಶಿ ವಿನಿಮಯದ ಹೆಚ್ಚು ಗಳಿಕೆ.

೨ ಸ್ಥಳೀಯ ತಾಂತ್ರಿಕತೆಯ ಗುಣಮಟ್ಟ ಹೆಚ್ಚುವುದಲ್ಲದೆ, ಯಂತ್ರೋಪಕರಣಗಳಲ್ಲಿ ಕೌಶಲ್ಯತೆ ಉತ್ತಮಗೊಳ್ಳುತ್ತದೆ.

೩ ರಾಜ್ಯ ಸರ್ಕಾರದ ಸ್ವಾಮ್ಯಯುತ ಸಂಸ್ಥೆಗಳು ಮತ್ತು ಖಾಸಗಿ ಉದ್ದಿಮೆಗಳ ನಡುವೆ ಆರೋಗ್ಯಕರ ಸ್ಪರ್ಧೆ ಉಂಟು ಮಾಡುವುದು.

೪ ಗುಣನಿಯಂತ್ರಣ.

೫ ವೈಜ್ಞಾನಿಕ ಉಪಯೋಗದಿಂದ ಕಚ್ಚಾ ಶಿಲೆಯ ಸದ್ಬಳಕೆ ಮತ್ತು ಅಡ್ಡಾದಿಡ್ಡಿ ಶಿಲೆಗಣಿಯನ್ನು ಹೊರತೆಗೆಯುವ ಕ್ರಮಕ್ಕೆ ತಡೆಹಿಡ್ಡುವುದು ಮತ್ತು ಹಾಳಾಗದಂತೆ ನೋಡಿಕೊಳ್ಳುವುದು.

೬ ರಾಜ್ಯದ ಹೊರಗಡೆಗೆ ಕಚ್ಚಾ ಶಿಲೆಯ ಅನಧಿಕೃತ ಸಾಗಾಣಿಯ ತಡೆಗಟ್ಟುವಿಕೆ.

ಶ್ರೀ ಎಂ. ಪಿ. ವೆಂಕಟೇಶ್.—ಅಧ್ಯಕ್ಷರೇ ಮೊದಲನೆಯ ಪ್ರಶ್ನೆಗೆ ೩೦ನೇ ಅಧಿಸೂಚನೆ ಸಂಖ್ಯೆಯಲ್ಲಿ ತಿದ್ದುಪಡಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಯಾವ ರೀತಿಯ ಅನುಕೂಲವಾಗುತ್ತದೆ ?

ಶ್ರೀ ಬಿ. ಶಿವಣ್ಣ.—ಈ ತಿದ್ದುಪಡಿ ಮಾಡಿರುವುದರಿಂದ ಸಾರ್ವಜನಿಕರಿಗೆ ಲಾಭವಾಗಿದೆ. ಗ್ರಾನೈಟ್ ಪಾಲಿಸಿಯನ್ನು ಲಿಬರಲೈಸ್ ಮಾಡಿದ್ದೇವೆ.

ಶ್ರೀ ಎಂ. ಪಿ. ವೆಂಕಟೇಶ್.—ಸಾರ್ವಜನಿಕರಿಗೆ ಯಾವ ರೀತಿ ಅನುಕೂಲವಾಗುತ್ತದೆ ಎಂದು ಹೇಳಿ.

ಶ್ರೀ ಬಿ. ಶಿವಣ್ಣ.—ಮೊದಲು ಏನು ಇತ್ತು ಎಂದರೆ ೩ (ಎ) ರೂಲ್...೧೯೬೯ ರಲ್ಲಿ ಎಲ್ಲವನ್ನೂ ಸರ್ಕಾರಕ್ಕೆ ತೆಗೆದುಕೊಂಡು.....

ಶ್ರೀ ವಾಟಾಳ್ ನಾಗರಾಜ್.—ಸಾರ್ವಜನಿಕರಿಗಾಗುವ ಲಾಭ ಏನೆಂದು ಹೇಳಿ ?